ಕ್ರ.ಸಂ.7

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಮರಿತಿಬ್ಬೇಗೌಡ ಇವರು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿರುವ "ಚಾಮರಾಜನಗರ ಜಿಲ್ಲೆಯ ಬಿ.ಆರ್.ಟಿ ಹುಲಿ ಮೀಸಲು ಅರಣ್ಯ ಹಾಗೂ ರಾಜ್ಯದ ಇತರೆ ಕಡೆಗಳಲ್ಲಿ ದಿನಗೂಲಿ ಆಧಾರದ ಮೇಲೆ ನೇಮಕಾತಿ ಹೊಂದಿ, ಅರಣ್ಯ ವೀಕ್ಷಕರಾಗಿ ಕಳ್ಳಬೇಟೆ ತಡೆ ಶಿಬಿರಗಳಲ್ಲಿ 24 ತಾಸು ಹಗಲು-ರಾತ್ರಿ ನಿರಂತರವಾಗಿ ಜೀವದ ಹಂಗನ್ನು ತೊರೆದು ಕಾಡಿನಲ್ಲೇ ವಾಸ್ತವ್ಯ ಮಾಡುತ್ತಾ, ಕಾರ್ಯನಿರ್ವಹಿಸುತ್ತಿರುವ ಇವರಿಗೆ 3-4 ತಿಂಗಳುಗಳಿಂದ ವೇತನ ಪಾವತಿಯಾಗದ ಹಿನ್ನಲೆಯಲ್ಲಿ ಧರಣಿ ನಡೆಸಲು ನಿರ್ಧರಿಸಿರುವ ಬಗ್ಗೆ ದಿನಾಂಕ: 13.02.2023 ರ "ಕನ್ನಡ ಪ್ರಭ" ದಿನ ಪತ್ರಿಕೆಯಲ್ಲಿ ವರದಿಯಾಗಿರುತ್ತದೆ. ಕಳ್ಳಬೇಟೆ, ಅಗ್ನಿ ದುರಂತ ತಡೆ ಸೇರಿದಂತೆ ಅರಣ್ಯ ಸಂರಕ್ಷಣೆಯಲ್ಲಿ ಕಾರ್ಯಪ್ರವೃತ್ತರಾಗಿರುವ ಇವರಿಗೆ ಸಕಾಲದಲ್ಲಿ ಸಂಬಳ ನೀಡದೇ ಇರುವುದು ಶೋಚನೀಯ ಸಂಗತಿ. ಬೇಸಿಗೆ ಪ್ರಾರಂಭವಾಗಿರುವ ಈ ಸಂಧರ್ಭದಲ್ಲಿ ಸದರಿ ಸಿಬ್ಬಂದಿಗಳು ಧರಣಿ ನಿರತರಾದಲ್ಲಿ ಅರಣ್ಯ ಸಂರಕ್ಷಣೆ ಮಾಡುವುದು ಕಷ್ಟಸಾಧ್ಯ . ಕಾಡಿಗೆ ಬೆಂಕಿ ಬಿದ್ದಲ್ಲಿ ಭರಿಸಲಾಗದ ಹಾಗೂ ಸರಿಪಡಿಸಲಾಗದ ನಷ್ಟ ಉಂಟಾಗಿ, ಪರಿಸರ ನಾಶವಾಗಲಿದೆ. ಇದು ಪರಿಸರದ ಮೇಲೆ ಗಂಭೀರ ಪರಿಣಾಮ ಬೀರುತ್ತದೆ. ಅಲ್ಲದೇ ಕಳ್ಳಬೇಟೆ ಶಿಬಿರಗಳಿಗೆ ತಾತ್ಕಾಲಿಕ ಶೆಡ್ ಗಳನ್ನು ನಿರ್ಮಿಸಲಾಗಿದ್ದು, ಕಾಡು ಪ್ರಾಣಿಗಳಿಂದ ರಕ್ಷಣೆ ಇಲ್ಲದಂತಾಗಿದೆ. ಆದ ಕಾರಣ ಅವುಗಳನ್ನು ಖಾಯಂ ಕಟ್ಟಡಗಳಾಗಿ ಪರಿವರ್ತಿಸಿ, ಶಿಬಿರಗಳಿಗೆ ಸೂಕ್ತ ರಕ್ಷಣೆ , ಒದಗಿಸುವುದು ಅನಿವಾರ್ಯ ವೇತನ ಸಕಾಲದಲ್ಲಿ ಬಿಡುಗಡೆಯಾಗದೆ ಅವರುಗಳ ಕುಟುಂಬ ನಿರ್ವಹಣೆ ಮಕ್ಕಳ ಪಶುಪಾಲನೆ, ಪೋಷಣೆ, ವಿಧ್ಯಾಭ್ಯಾಸಕ್ಕೆ ಅತೀವ ಆರ್ಥಿಕ ಸಂಕಷ್ಟ ಉಂಟಾಗಿದೆ.

ಆದಕಾರಣ ಸದರಿ ವಿಷಯವನ್ನು ಅತಿ ಗಂಭೀರವಾಗಿ ಪರಿಗಣಿಸಿ, ಕೂಡಲೇ ಇವರಿಗೆ ಬಾಕಿ ನೀಡಬೇಕಾದ ವೇತನವನ್ನು ಒಂದೇ ಕಂತಿನಲ್ಲಿ ಕೂಡಲೇ ಪಾವತಿಸಬೇಕು ಹಾಗೂ ಇವರಿಗೆ ನೀಡಲಾಗುತ್ತಿರುವ ವೇತನವನ್ನು ಪರಿಷ್ಕರಣೆ ಮಾಡುವ" ವಿಷಯಕ್ಕೆ ಮಾನ್ಯ ಮುಖ್ಯ ಮಂತ್ರಿಗಳ ಹೇಳಿಕೆ:

ಬಿಆರ್‌ಟಿ ಹುಲಿ ಸಂರಕ್ಷಿತ ಪ್ರದೇಶದ ವ್ಯಾಪ್ತಿಯಲ್ಲಿ 26 ಕಳ್ಳಬೇಟೆ ತಡೆ ಶಿಬಿರಗಳಿದ್ದು, ಪ್ರತೀ ಶಿಬಿರದಲ್ಲಿ ತಲಾ 04 ಜನರಂತೆ 104 ಜನ ಕಳ್ಳಬೇಟೆ ತಡೆ ಶಿಬಿರದ ವಾಚರ್‌ಗಳು ಹಾಗೂ ಇನ್ನಿತರೆ 44 ಜನ ಸೇರಿ ಒಟ್ಟಾರೆ 148 ಜನ ಸಿಬ್ಬಂದಿಗಳು ದಿನಗೂಲಿ/ಹೊರಗುತ್ತಿಗೆ ಆಧಾರದಲ್ಲಿ ಕರ್ತವ್ಯ ನಿರ್ವಹಿಸುತ್ತಿರುತ್ತಾರೆ. ಸದರಿ ಸಿಬ್ಬಂಧಿಗಳಿಗೆ ಒದಗಿಸಿರುವ ಕಳ್ಳಬೇಟೆ ತಡೆ ಶಿಬಿರಗಳು ಖಾಯಂ ಕಟ್ಟಡಗಳಾಗಿದ್ದು, ಶಿಬಿರಗಳ ಸುತ್ತಲೂ ಆನೆ ತಡೆ ಕಂದಕ, ಸೋಲಾರ್ ತಂತಿ ಬೇಲಿ ನಿರ್ಮಿಸಿ ಸೂಕ್ತ ರಕ್ಷಣೆ ಒದಗಿಸಲಾಗಿದೆ. ಮುಂದುವರೆದು, ಕಳ್ಳಬೇಟೆ ಶಿಬಿರಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಹೊರಗುತ್ತಿಗೆ ನೌಕರರಿಗೆ ವೇತನ ಪಾವತಿಸಲು ಕೇಂದ್ರ ಪುರಸ್ಕೃತ ಹುಲಿ ಯೋಜನೆಯ ವಾರ್ಷಿಕ ಕ್ರಿಯಾಯೋಜನೆಯಲ್ಲಿ ಅವಕಾಶ ಕಲ್ಪಿಸಿಕೊಳ್ಳಲಾಗಿದೆ.

....2

ಬಿಆರ್‌ಟಿ ಹುಲಿ ಸಂರಕ್ಷಿತ ಪ್ರದೇಶದ ವಾರ್ಷಿಕ ಕ್ರಿಯಾ ಯೋಜನೆಗೆ ಕೇಂದ್ರ ಸರ್ಕಾರವು ದಿನಾಂಕ:01-02-2023 ರಂದು ಅನುಮೋದನೆ ನೀಡಿರುತ್ತದೆ. ಸದರಿ ಸೇವೆಯನ್ನು ಒದಗಿಸಲು ಟೆಂಡರ್ ಕರೆದಿದ್ದು, ಟೆಂಡರ್‌ದಾರರ ಮೂಲಕ ಸದರಿ ಸಿಬ್ಬಂದಿಗಳಿಗೆ ವೇತನ ಪಾವತಿಸಲಾಗುತ್ತಿದೆ. ಕೇಂದ್ರ ಸರ್ಕಾರದಿಂದ ವಾರ್ಷಿಕ ಕ್ರಿಯಾ ಯೋಜನೆಯ ಅನುಮೋದನೆಯು ವಿಳಂಭವಾದ ಹಿನ್ನಲೆಯಲ್ಲಿ, ರಾಜ್ಯ ಸರ್ಕಾರವು ಹೊರಗುತ್ತಿಗೆ ನೌಕರರ ವೇತನ ಪಾವತಿಗಾಗಿ ಸದರಿ ಲೆಕ್ಕಶೀರ್ಷಿಕೆಯಡಿ ರಾಜ್ಯದ ಪಾಲಿನ ಅನುದಾನದಲ್ಲಿ ಮುಂಗಡವಾಗಿ ರೂ.85.00 ಲಕ್ಷಗಳನ್ನು ಬಿಡುಗಡೆಗೊಳಿಸಿದ್ದು, ಸದರಿ ಅನುದಾನದಿಂದ ಹೊರಗುತ್ತಿಗೆ ಸಿಬ್ಬಂದಿಗಳಿಗೆ ಏಪ್ರಿಲ್ 2022 ರಿಂದ ಆಗಸ್ಟ್ 2022 ರವರೆಗೆ ವೇತನ ಪಾವತಿಸಲಾಗಿದೆ. ಮುಂದುವರೆದು ಅನುಮೋದನೆಯಾದ ವಾರ್ಷಿಕ ಕ್ರಿಯಾ ಯೋಜನೆಯನ್ವಯ ಕೇಂದ್ರದ ಮತ್ತು ರಾಜ್ಯದ ಪಾಲಿನ ಅನುದಾನ ಬಿಡುಗಡೆ ಮಾಡಲು ಸರ್ಕಾರದ ಹಂತದಲ್ಲಿ ಪರಿಶೀಲನೆಯಲ್ಲಿದೆ.

**ಇ-ಸಂಖ್ಯೆ:ಅಪಜೀ 02 ಎಫ್‌ಟಿಎಸ್ 2023**

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ